

# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ನೀರು ಇಳಿದ ಹೊತ್ತು ಕೊಲೆ ಗಿಲೆ?

ಭಾಗ 12

ಡ್ರಿಂಕ್ಸ್ ಕೊನೆಯ ಹಂತಕ್ಕೆ ತಲುಪಿತ್ತು. ನಾನು ಫಿಶ್ ಕರಿ ರೈಸ್ ಬಡಿಸಿಕೊಂಡಿದ್ದೆ. ಕೆ.ಎಮ್. ನಯ್ಯಾರ್ ಇನ್ನೂ ಡ್ರಿಂಕ್ಸ್ ಮಾಡುತ್ತಲೇ ಇದ್ದರು. 'ನೀವು ಅಮೆರಿಕದ ಲಾಸ್ ವೆಗಾಸ್ ನೋಡಿದ್ದೀರಾ? ಇಂದಿಗೆ ಸರಿಯಾಗಿ ವರ್ಷದ ಹಿಂದೆ ನಾನೂ ಈ ಕೆ.ಎಮ್. ನಯ್ಯಾರ್ ಲಾಸ್ ವೆಗಾಸ್‌ನಲ್ಲಿ ಇದ್ವಿ. ಎಂಟು ದಿನಗಳು ಎಂಟು ನಿಮಿಷಗಳಂತೆ ಕಳೆದುಹೋಗಿದ್ದವು' ನನ್ನ ಕಡೆ ನೋಡುತ್ತಾ ಕರುಣಾಕರನ್ ಮೊದಲಿಯಾರ್ ಹೇಳಿದ್ದರು. ನಾನು ಅಮೆರಿಕವನ್ನು ನೋಡಿದ್ದೆನಾದರೂ ಲಾಸ್ ವೆಗಾಸ್ ನೋಡಿರಲಿಲ್ಲ. 'ನಾನು ಲಾಸ್ ವೆಗಾಸ್ ನೋಡಿಲ್ಲ, ಆದರೆ ಅದು ಜಗತ್ತಿನಲ್ಲೇ ಸೆಕ್ಸ್ ಟೂರಿಸಂಗೆ ತುಂಬಾ ಫೇಮಸ್ ಎಂದು ಬಲ್ಲೆ' ಎಂದು ಪ್ರತಿಕ್ರಿಯಿಸಿದ್ದೆ ನಾನು. 'ಓಹ್, ಅಲ್ಲಿನ ಜೂಜು ಮತ್ತು ಸೆಕ್ಸ್ ಟ್ರೇಡ್ ನೋಡಿ ದಂಗಾಗಿ ಹೋಗಿದ್ದೆ. ಜಗತ್ತಿನ ಅನೇಕ ಆಗರ್ಭ ಶ್ರೀಮಂತರು ದುಡ್ಡನ್ನು ಕಳೆದುಕೊಳ್ಳಲಿಕ್ಕಾಗಿಯೇ ಅಲ್ಲಿಗೆ ಬಂದು ತಿಂಗಳುಗಟ್ಟಲೆ ಬೀಡುಬಿಡುತ್ತಾರಂತೆ. ಹಣವೊಂದಿದ್ದರೆ ಮರಳುಗಾಡನ್ನು ಕೂಡಾ ಸ್ವರ್ಗವನ್ನಾಗಿ ಬದಲಾಯಿಸಬಹುದು ಎನ್ನುವುದಕ್ಕೆ ಲಾಸ್ ವೆಗಾಸ್ ಖಂಡಿತವಾಗಿ ಬೆಸ್ಟ್ ಎಕ್ಸಾಂಪಲ್. ಮತ್ತೆ ಒಂದು ವರ್ಷಕ್ಕೆ ಸರಿಯಾಗಿ ಬರಬೇಕೆಂದು ಅಲ್ಲಿ ಇಬ್ಬರೂ ಮಾತನಾಡಿಕೊಂಡಿದ್ವಿ. ಆದರೆ ನಾವು ಅಂದುಕೊಂಡಂತೆ ಯಾವುದೂ ನಡೆಯುವುದಿಲ್ಲ. ಮತ್ತು ಹಣದಿಂದಲೇ ಸ್ವರ್ಗ ಸಿಗುವುದೆನ್ನುವ ಮಾತು ಸತ್ಯವೇನೂ ಅಲ್ಲ. ಅತಿ ಸುಖ ಕೂಡಾ ಒಮ್ಮೊಮ್ಮೆ ಮನುಷ್ಯನನ್ನು ಫ್ರುಸ್ಟ್ರೇಷನ್‌ಗೆ ಹೊತ್ತು ಸಾಗುತ್ತದೆ. ಅತಿಯಾದರೆ ಅಮೃತವೂ ವಿಷವಾಗುತ್ತದಂತೆ ಎಂಬ ಮಾತು ಖಂಡಿತವಾಗಿ ಎಲ್ಲಾ ಸಂಗತಿಗಳಿಗೂ ಅನ್ವಯವಾಗುತ್ತದೆ' ಎಂದು ಮಾತನಾಡುವುದರೊಂದಿಗೆ ಕರುಣಾಕರನ್ ಮೊದಲಿಯಾರ್ ಮೇಲೆ ಕಾಣುವುದಕ್ಕಿಂತಲೂ ಒಳಗೆ ತುಂಬಾ ಡೆಪ್ತ್ ಇದಾರೆ ಎನ್ನುವ ಸಂಗತಿ ಅನಾವರಣಗೊಂಡಿತ್ತು.

ಅಷ್ಟರಲ್ಲಿ ಕೆ.ಎಮ್. ನಯ್ಯಾರರ ಫೋನ್ ರಿಂಗ್ ಆಗಿತ್ತು. ಫೋನ್ ರಿಂಗಾಗುತ್ತಿದ್ದಂತೆ ಸ್ವಯಂ ಚಾಲಿತವಾಗಿ ಫೋನ್ ಲೌಡ್‌ಸ್ಪೀಕರ್‌ಗೆ ಕನ್ವರ್ಟ್ ಆಗಿತ್ತು. ಫೋನ್ ರಿಸೀವ್ ಮಾಡಿಕೊಂಡು ಕೆ.ಎಮ್. ನಯ್ಯಾರ್ 'ಹಲೋ' ಎಂದಿದ್ದರು. ಆ ಕಡೆಯಿಂದ 'ದಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್'ನಿಂದ ಸುಧೀಂದ್ರ ನಯ್ಯಾರ್, 'ಹಲೋ ಕೆ.ಎಮ್. ಎಲ್ಲಿದ್ದೀಯ? ಊಟ ಆಯ್ತಾ?' ಎಂದು ಕೇಳಿದ್ದರು. 'ಚಂಗನ್ನೇರಿಯಲ್ಲಿ ಇದ್ದೀವಿ. ಇನ್ನೂ ಊಟ ಆಗಿಲ್ಲ' ಎಂದು ಉತ್ತರಿಸಿದ್ದರು ಕೆ.ಎಮ್. ನಯ್ಯಾರ್. 'ಕರುಣಾಕರನ್ ಮನೆಯಲ್ಲಾ?' ಮರುಪ್ರಶ್ನೆ. 'ಹೂಂ' ಮರು ಉತ್ತರ ಈ ಕಡೆಯಿಂದ. 'ನಮ್ಮ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ಗೆ ಪ್ರತಿವರ್ಷ ಇಪ್ಪತ್ತೊಂದು ಲಕ್ಷ ನೀಡುತ್ತಿರುವ ಉದಾರ ದಾನಿ. ಅವರ ಮನೆ ತಣ್ಣಗೆ ಇರ್ಲಿ. ಇವೊತ್ತು ನೆಗಡಿ ಕೆಮ್ಮಿನಿಂದ ಆರು ಜನ ಸತ್ತುಹೋಗಿದ್ದಾರೆ. ತುಂಬಾ ಬೇಸರವೆನಿಸುತ್ತಿದೆ. ಒಂದು ಕಡೆ ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಇಬ್ಬರನ್ನು ಕಳೆದುಕೊಂಡಿದ್ದು ಮಾತ್ರ ನನ್ನನ್ನು ತುಂಬಾ ಧೃತಿಗೆಡುವಂತೆ ಮಾಡಿದೆ. ಅರುಂಧತಿಯಂತೂ ನಮ್ಮ ಸ್ಕೂಲಿಗೆ ಎಷ್ಟೊಂದು ಸೇವೆ ಸಲ್ಲಿಸುತ್ತಿದ್ದಳು ನೋಡು. ಒಳ್ಳೆಯವರನ್ನು ದೇವರು ಹೆಚ್ಚು ಕಾಲ ಈ ಭೂಮಿ ಮೇಲೆ ಬದುಕಲು ಬಿಡುವುದಿಲ್ಲ. ಮತ್ತೆ ನಿನ್ನೆ ಅಚ್ಯುತನ್ ನಂಬಿಯಾರ್ ಬಂದಿದ್ದನಂತೆ. ಅವನೊಂಥರ ಎರಡು ತಲೆ ನಾಗರಹಾವು ಇದ್ದಂತೆ. ನೀನು ಅವನ ನೀಚ ಕೆಲಸಗಳಿಗೆ ತುಂಬಾ ಸಪೋರ್ಟ್ ಮಾಡಿದೆ. ಕಾರ್ಲ್ ಮಾರ್ಕ್ಸ್ ಅಂತ ಹೆಸರಿಟ್ಟುಕೊಂಡು ಅಂಥ ನೀಚರ ಸಹವಾಸ ಮಾಡೋದು ಕೂಡಾ ಅಪರಾಧವಾಗಿಬಿಡುತ್ತದೆ. ಕೆಲವರು ಎಂಥ ಪವಿತ್ರ ಜಾಗದಲ್ಲಿ ಇದ್ರೂ ಅವರಲ್ಲಿ ಬರಿ ನೆಗೆಟಿವ್ ಎನರ್ಜಿ ಮಾತ್ರವೇ ಉತ್ಪತ್ತಿಯಾಗುತ್ತಿರುತ್ತದೆ. ಯಾವೋನೋ ಐಪಿಎಸ್ ಆಫೀಸರ್‌ಗೆ ನಮ್ಮ ಸಿಂಧೂ ಮೆನನ್‌ಳ ತಲೆ ಹಿಡಿಯಲು ಯತ್ನಿಸಿದವನಲ್ಲವೆ? ಇವೊತ್ತಿನ ಜಗತ್ತಿನ ರಾಜಕೀಯ, ಆಡಳಿತ, ವ್ಯಾಪಾರ ಒಪ್ಪಂದ ಸಕಲವೂ ಹೆಣ್ಣಿನ ಮೂಲಕವೇ ನಡೀತಿದಾವೆ. ಇರಲಿ, ದೇವರು ನೋಡಿಕೊಳ್ಳುತ್ತಾನೆ. ಈಗ ಇಲ್ಲಿ ಸತ್ತಿರುವವರ ಕಣ್ಣು, ಕಿಡ್ನಿ ಇತ್ಯಾದಿಗಳನ್ನು ಮಾಮೂಲಿಯಾಗಿ ಹೈಟೆಕ್ ಹಾಸ್ಪಿಟಲ್‌ಗೆ ಡೊನೇಟ್ ಮಾಡುತ್ತಿದ್ದೇನೆ. ನಮ್ಮ ಸ್ಕೂಲಿಗೂ ಅವರು ಒಳ್ಳೆ ಡೊನೇಷನ್ಸ್ ಕೊಡ್ತಿದಾರಲ್ಲ ಪಾಪ'